**O.S.No.72/2014 PW.2**

ದಿಃ **19-09-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ **No 1,2,4,5** ಪರ **CKMB** ವಕೀಲರವರಿಂದಃ</u>

ಗೋವಿಂದಪ್ಪನವರ ಗೋವಿಂದಪ್ಪನಿಗೆ **3** ಜನ ಮಕ್ಕಳು ಕುರುಡಪ್ಪ , ದುರುಗಪ್ಪ ಮತ್ತು ಗುಡ್ಡಪ್ಪ ಎಂಬ ಮಕ್ಕಳಿರುವ ಬಗ್ಗೆ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ವಂಶವೃಕ್ಷವನ್ನು ನನ್ನ ತಂದೆ ಇರುವ ಕಾಲಕ್ಕೆ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ವಂಶವೃಕ್ಷವನ್ನು ನನ್ನ ತಂದೆ ಇರುವ ಕಾಲಕ್ಕೆ ನ್ಯಾಯಾಲಯದಲ್ಲಿ ಹಾಜರು ಮಾಡಿಲ್ಲ ಎಂದರೆ ಮಾಡಿರುತ್ತೇವೆ. ವಂಶವೃಕ್ಷವನ್ನು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಂಶವೃಕ್ಷದಲ್ಲಿ ಮೂರು ಜನ ಮಕ್ಕಳಿಗೆ ಅವರ ಹೆಂಡತಿಯರ ಹೆಸರನ್ನು ಕಾಣಿಸಿರುತ್ತೇವೆ. ಕುರುಡಪ್ಪರ ಹೆಂಡತಿಯ ಮತ್ತು ಮಕ್ಕಳ ಹೆಸರು ನನಗೆ ಗೊತ್ತಿರುವುದಿಲ್ಲ ಮತ್ತು ವಂಶವೃಕ್ಷದಲ್ಲಿ ಕಾಣಿಸಿರುವುದಿಲ್ಲ. ದುರುಗಪ್ಪನ ಹೆಂಡತಿಯ ಹೆಸರು ನೀಲಮ್ಮ ಇವರ ಹೆಸರುಗಳನ್ನು ವಂಶವೃಕ್ಷದಲ್ಲಿ ಕಾಣಿಸಿರುತ್ತೇವೆ. ಗುಡ್ಡಪ್ಪನ ಹೆಂಡತಿಯರ ಹೆಸರು ಅಡವೆಮ್ಮ ಮತ್ತು ಅವರ ಮಕ್ಕಳ ಹೆಸರು ಅಜ್ಜಪ್ಪ , ನೀಲಪ್ಪ ಮತ್ತು ನಾಗಪ್ಪ ಇವರ ಹೆಸರುಗಳನ್ನು ವಂಶವೃಕ್ಷದಲ್ಲಿ ಕಾಣಿಸಿರುತ್ತೇವೆ. ಈ ವಂಶವೃಕ್ಷವನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ಅಜ್ಜಪ್ಪ , ನೀಲಪ್ಪ ಮತ್ತು ನಾಗಪ್ಪ ಇವರು ಪೋತಿಯಾಗಿರುತ್ತಾರೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಆಸ್ತಿಯು ಮೂಲತಃವಾಗಿ ನೀಲಮ್ಮನ ಹೆಸರಿನಲ್ಲಿ ಇತ್ತು. ಈಗ ಈ ದಾವಾ ಆಸ್ತಿಯು ಪ್ರತಿವಾದಿ **1** ರವರ ಹೆಸರಿನಲ್ಲಿರುತ್ತದೆ. ದುರುಗಪ್ಪನ ಹೆಸರಿನಲ್ಲಿ ದಾವಾ ಆಸ್ತಿ ಇತ್ತು ಎಂದು ತೋರಿಸಲು ಪಹಣಿಯನ್ನು ಹಾಜರು ಮಾಡಿರುತ್ತೇನೆ. ದುರುಗಪ್ಪನ ಹೆಸರಿಗೆ ಭೂಮಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದುರುಗಪ್ಪನ ಹೆಸರಿಗೆ ದಾವಾ ಆಸ್ತಿಯು ಇದ್ದ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ನೀಲವ್ವ ಗಂಡ ದುರುಗಪ್ಪ ರವರ ಹೆಸರಿನಲ್ಲಿ ಪೋತಿ ಪಟ್ಟ ಆದ ಬಗ್ಗೆ ಹಕ್ಕು ಬದಲಾವಣೆ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ಹಕ್ಕು ಬದಲಾವಣೆ ಪ್ರತಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಯಾರು ಯಾರು

ತೀರಿಕೊಂಡಿರುತ್ತಾರೆ ಎಂಬುವುದನ್ನು ತೋರಿಸಲು ದಾವೆಯಲ್ಲಿ ವಂಶವೃಕ್ಷವನ್ನು ಹಾಕಿರುತ್ತೇವೆ. ದಾವೆ ಆಸ್ತೀಯನ್ನು ಹೊರತುಪಡಿಸಿ ಬೇರೆ ಭೂಮಿಗಳು ನನ್ನ ತಂದೆ ಹೆಸರಿಗೆ ಇರುತ್ತವೆ ಎಂದರೆ ಸರಿ. ಪ್ರತಿವಾದಿಯರ ಆಸ್ತೀಗಳು ಅವರವರ ಹೆಸರಿನಲ್ಲಿ ಬೇರೆ ಬೇರೆ ಇರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. **01** ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುವ ಬಗ್ಗೆ ಸಹಾಯಕ ಆಯುಕ್ತರಿಗೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಹಕ್ಕು ಬದಲಾವಣೆ ಮಾಡಬೇಡಿ ಎಂದು ನಮ್ಮ ತಂದೆ ತಕರಾರನ್ನು ನೀಡಿರುವುದಿಲ್ಲ. ನನ್ನ ಹೆಸರು ಪೂಜಾರ ಲಕ್ಕಪ್ಪ. ನಾನು ಶಾಲೆಯನ್ನು ಕಲೆತಿರುವುದಿಲ್ಲ. **1982-1983** ರಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹರವಿಯಲ್ಲಿ ನಾನು ಓದಿರುತ್ತೇನೆ ಎಂದರೆ ಸರಿ. ಶಾಲೆಯನ್ನು ಸೇರಿಸುವಾಗ ತಂದೆ ತಾಯಿಯ ಹೆಸರು ಮತ್ತು ಜನ್ಮ ದಿನಾಂಕ ಬರೆಸಿರುತ್ತಾರೆ ಎಂದರೆ ಸರಿ. ಸದರಿ ಶಾಲೆಯ ದಾಖಲೆಯಲ್ಲಿ ನನ್ನ ಹೆಸರು ಪೂಜಾರ ಲಕ್ಕಪ್ಪ ತಂದೆ ಪೂಜಾರ ಹೊನ್ನಪ್ಪ ಎಂದು ಇರುತ್ತದೆ ಎಂದರೆ ಸರಿ.

ಪಾಟೀ ಸವಾಲನ್ನು ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.